(ಗೊಂದಲ)

ಅಧ್ಯಕ್ಷರು : ತಾವು ಹೇಳಿದ್ದಕ್ಕೆ ರಿಪ್ಲೈ ಮಾಡಿದ್ದಾರೆ. ಮತ್ತೆಮತ್ತೆ ಇದನ್ನೇ ಚರ್ಚೆ ಮಾಡಿಕೊಂಡು ಹೋಗುವುದು ಬೇಡ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ರೆಕಾರ್ಡ್‌ಗೆ ಹಾಗೆಯೇ ಹೊರಟು ಹೋಗಬೇಕೇ? ನನಗೆ ಐದು ನಿಮಿಷ ಅವಕಾಶ ಕೊಡಿ, ಮುಗಿಸುತ್ತೇನೆ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಜನ ಅವರನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡಿದ್ದಾರೆ. ಶಿವಮೊಗ್ಗದಲ್ಲಿ ಅಂದರೆ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ರಿಸಲ್ಟ್ ಏನು ಬಂದಿದೆ ಎಂದು ಎಲ್ಲರಿಗೂ ಗೊತ್ತಾಗಿದೆ.

(ಗೊಂದಲ)

ಶ್ರೀ ಎಸ್.ಎ. ರಾಮದಾಸ್ : ಯಾವ ನಿಯಮದ ಅಡಿಯಲ್ಲಿ ಈ ವಿಚಾರ ಚರ್ಚೆಯಾಗುತ್ತಿದೆ ಎಂದು ಹೇಳಿ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಸಭಾಧ್ಯಕ್ಷರೆ, House orderನಲ್ಲಿಲ್ಲ. ಮೊದಲು House ಅನ್ನು order ಗೆ ತೆಗೆದುಕೊಂಡು ಬನ್ನಿ. ಯಾವ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ದಯವಿಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

(ವಿರೋಧ ಪಕ್ಷಗಳ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

(ವಿರೋಧ ಪಕ್ಷಗಳ ಸದಸ್ಯರು ಧರಣಿಯಲ್ಲಿದ್ದಾಗಲೇ, ಗೊಂದಲದ ನಡುವೆಯೇ ಮಾನ್ಯ ಅಧ್ಯಕ್ಷರು ಕಾರ್ಯಕಲಾಪಗಳ ಪಟ್ಟಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಂಡರು)

7. ಪ್ರಶ್ನೋತ್ತರ:

ಅಧ್ಯಕ್ಷರು : ಪ್ರಶ್ನೋತ್ತರಗಳನ್ನು ಮಂಡಿಸಿ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರು) : ದಿನಾಂಕ: 10–01–2011ರ 1ನೇ ಪಟ್ಟಿಯ,

ಸದನದಲ್ಲಿ ಉತ್ತರಿಸುವ 13 ಪ್ರಶ್ನೆಗಳ ಪೈಕಿ 12 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 34 ಪ್ರಶ್ನೆಗಳ ಪೈಕಿ 29 ಉತ್ತರಗಳನ್ನು ಮತ್ತು ದಿನಾಂಕ:11-01-2011ರ 2ನೇ ಪಟ್ಟಿಯ, ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 45 ಪ್ರಶ್ನೆಗಳ ಪೈಕಿ 26 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಅನುಬಂಧ- I, II, III ಮತ್ತು IV)

8. ಸಭೆಯ ಮುಂದಿಡಲಾದ ಕಾಗದ ಪತ್ರಗಳು:

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2009ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ (ಪಂಚಾಯತ್‌ರಾಜ್ ಸಂಸ್ಥೆಗಳು) ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು; ಮಾನ್ಯ ಅಧ್ಯಕ್ಷರೆ, 1976ರ ಕರ್ನಾಟಕ ವೃತ್ತಿ, ವ್ಯಾಪಾರಗಳು ಮತ್ತು ಕಸುಬುಗಳ ತೆರಿಗೆಗಳು ಕಾಯ್ದೆಯ ಕಲಂ 33(3)ರ ಮೇರೆಗೆ:

ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ನಿಯಮಗಳು, 1976ನ್ನು ತಿದ್ದುಪಡಿ ಮಾಡಿ, ನೆ-4 ನ್ನು ಪ್ರತ್ಯಾಯೋಜಿಸಿ ದಿನಾಂಕ: 09.07.2010ರಂದು ಆಗಿರುವ ಎಫ್‌ಡಿ 140 ಸಿಎಸ್‌ಎಲ್ 2010ನೇ ಸಂಖ್ಯೆಯ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ :

1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲೆ ತೆರಿಗೆ ನಮಗಳಿಗೆ ದಿನಾಂಕ: 01.04.2010ರಿಂದ ಜಾರಿಗೆ ಬರುವಂತೆ ಹೊಸ ಗಳಾದ 8-ಬಿ, 3ಬಿ, 3ಸಿ ಮತ್ತು 3ಡಿ ಗಳನ್ನು ಸೇರ್ಪಡೆಗೊಳಿಸಿ,